

ಮಾಧವಿ ಭಂಡಾರಿ ಕೆರೆಕೋಣ

ಕಲೆ: ಸಂತೋಷ್ ಸಸಿಹಿತ್ಲು

# ಕೊಡೆದೇವು



ಕಣ್ಣಿ ಕಳಚಿಕೊಳ್ಳುವಂತೆ ಒಂದೇ ಸಮನೆ ಅಂಬಾss ಅಂಬಾss ಎಂದು ಒದರುವ ವಾರದ ಹಿಂದಷ್ಟೆ ಹುಟ್ಟಿದ ಕರುವಿನ ಮೊಲೆತೊಡುವಿಗೆ ಕರುಳು ಚುರ್ ಎಂದು ಮೊದಲು ಕೊಟ್ಟಿಗೆ ಸಂತೆಯನ್ನೇ ಮುಗಿಸೋಣವೆಂದು ಕವಳಿಗೆಗೆ ಬೆಣ್ಣೆ ಹಚ್ಚಿ ಕೊಟ್ಟಿಗೆಗೆ ಕಾಲಿಟ್ಟಳು. ಕೊರಳ ಕಣ್ಣಿಯನ್ನೂ ಬಿಚ್ಚಲು ಕೊಡದಂತೆ ಅವಳನ್ನೇ ಜಡಿಯುವ ಕರುವಿನ ಅವಸರ ಕಂಡಾಗ ತುಟಿ ಹಿಪ್ಪಳಿಸಿ ಅಳುವ, ಕೈಯಲ್ಲಿ ಎತ್ತಿಕೊಳ್ಳುತ್ತಿದ್ದಂತೆ ಎದೆಗೆ ಮುಖ ತಿಕ್ಕುತ್ತ ಮೊಲೆತೊಟ್ಟ ಹುಡುಕುವ ತನ್ನ ಕಂದನನ್ನೇ ಕಂಡಂತಾಗಿ ತಾಯ್ತನದ ನಗು ಮುಖದಲ್ಲರಳಿತು. ಕರು ಬಿಟ್ಟು ಹಾಲು ಸೊರೆಸಿ, ಕರು ಎಳೆದು ಮುಂದಿನ ಗೂಟಕ್ಕೆ ಕಟ್ಟಿ, ಧಾರೆ ಎಳೆಯುತ್ತಿದ್ದಂತೆ ಗೂಟ ಕಿತ್ತು ಬರುವಂತೆ ಸುತ್ತುವ ಕರುವಿನ ಚಡಪಡಿಕೆ ನೋಡಿ, 'ಆತೊ, ನಾ ಕರದ್ರೆ ಕವಳ್ಗೆ ತುಂಬ ಹಾಲು ಕೊಡ್ತೋ ದನ ನೀ ಹೋದಾಗಷ್ಟೆಯಾ ಅರ್ಧ ಕವಳ್ಗೆ ಕೊಡ್ತನೆ?' ಎಂದು ನಾನೇ ಕುಡಿದು ಬಂದಂತೆ ತಿವಿವ ಅತ್ತೇರ ಮಾತು ಯಾವತ್ತೂ ಇದ್ದದ್ದೇ ಎಂದುಕೊಳ್ಳುತ್ತ ಕರುವಿನ ಮೈಸವರಿ ಕುಡಿಯಲು ಬಿಟ್ಟಳು. ಹಾಲಿಗೆ ಸೆರಗು ಮುಚ್ಚಿ ಅಡಿಗೆ ವೋರಿಗೆ ಕಾಲಿಟ್ಟಳು.

ಸ್ವಲ್ಪ ದಮ್ಮಿನ ಪ್ರಕೃತಿ ಇರುವ ಅತ್ತೆ ಆಗಲೇ ಎದ್ದು ಕುಡಿಯಲು ಬಿಸಿನೀರು ಕಾಯಿಸಿಕೊಳ್ಳುತ್ತಿದ್ದರು. ಅವರು ಸ್ವಲ್ಪ ಅಚೆ ಸರಿದು ಬಿಸಿ ನೀರನ್ನು ಬೆರಸಿಕೊಳ್ಳುತ್ತಿರುವಾಗ ಹಾಲನ್ನು ಕಾಯಿಸಲು ಇಟ್ಟಳು. ಅತ್ತೆ ಹೀಗೆ ಪಾತ್ರೆಯ ಕಡೆಗೆ ತೆರೆಗಣ್ಣು ಹಾಯಿಸಿದ್ದನ್ನು ನೋಡಿಯೂ ನೋಡದಂತೆ ಕಲಾವತಿ, 'ಮಧ್ಯಾಹ್ನ ಊಟಕ್ಕೆ ಎಂತ ಮಾಡ್ಲಿ?' ಎಂದಳು. 'ಎಂತದರು ಮಾಡ್ಕ್ಯ ಕರ್ಮವ. ಇದು ಪ್ರತಿ ವರ್ಷಾನೂ ಇಪ್ಪದೆಯಲಿ ನಮ್ಮನೇಲಿ. ಉಮಾಮಹೇಶ್ವರನ ಜಾತ್ರೆ ತಪ್ಪದ್ರೂ ನಮ್ಮನೇಲಿ ಸರ್ಪದು ತಪ್ಪಿಲ್ಲೆ. ಯಂಗಕ್ಕೆ ನಾಚ್ಕೆ ಆಗ್ತು ಬಿಡು' ಎಂದು ಲೋಟ ಅಲ್ಲೇ ಅವಶ್ಯಕತೆಗಿಂತ ಹೆಚ್ಚೇ ಜರಿದು ತಮ್ಮ ಕೋಣೆ ಸೇರಿದರು ಅತ್ತೆ.

'ಯಂಗಾದ್ರೂ ಬೇಕಿತ್ತೆ ಈ ಜಾತ್ರೆ, ಅದೂ ಯನ್ನ ಜೀವದ ಜಾತ್ರೆ. ಆ ದಿನ ಹಿಂಡಿ ಹಿಪ್ಪೆಯಾಗುವ ಯನ್ನ ಪರಿ ಇವಕ್ಕೆಲ್ಲ ಹ್ಯಾಂಗ್ ತಿಳ್ಯವು?' ಎಂದುಕೊಳ್ಳುತ್ತ ಚಹಾಸಂತೆಯನ್ನೂ ಬೆಳಗಿನ ಕೆಲಸವನ್ನೂ ಬೇಗ ಬೇಗ ಮುಗಿಸಿದಳು. ಮನೆಯನ್ನೆಲ್ಲ ಚಕಚಕ ಹೊಳೆಯುವಂತೆ ಮಾಡಿ ಸ್ನಾನ ಮುಗಿಸಿ ಅಡುಗೆಗೆ ಮೊದಲಿಟ್ಟಳು. ಮೊಗೆಕಾಯನ್ನು ಕೊರೆದು ಪಳದ್ಯಾ ಮಾಡಿ ಇಂಗಿನಿಂದ ವಗ್ಗರಿಸಿದ ಕಂಪು ಮನೆಯೆಲ್ಲ ತುಂಬಿತು. ಹಾಗಲಕಾಯನ್ನು ಹೆಚ್ಚಿ ಕಮ್ಮಗೆ ಹುರಿದು ಹಶಿ ಮಾಡಿ, ಎರಡೂ ಬಿಳಿಯ ಪದಾರ್ಥವೇ ಆಯಿತೆಂದು ಒಣ ಮೆಣಸನ್ನು ಸುಟ್ಟು ಕಟ್ಟಿಗೆ ಒಂದು ಶುಂಠಿ ಚಟ್ನೆಯನ್ನು ಮಾಡಿ ಕಟ್ಟೆಯ ಮೇಲೆ ಮುಚ್ಚಿಟ್ಟಳು.

ಊಟದ ನಂತರದ ಆಸ್ರಿಯ ನೆನಪಾಯಿತು ಕಲಾವತಿಗೆ. 'ಬೆಳಗಿನ ಆಸರಿ, ಯಡೊತ್ತಿನ ಆಸ್ರಿ, ಊಟ, ಮತ್ತೆ ಮದ್ದೆ ಮೇಲಿನ ಆಸ್ರಿ, ಮತ್ತೆ ರಾತ್ರಿ ಊಟದ